<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ , ಹೊನ್ನಾಳಿ.</u>

CC. No.467/2016

ದೋ.ಸಾ. 03

ಅ.ಸಾ. 03

ಪ್ರ.ವ.ಬೊ. ದಿನಾಂಕ. 09-03-2022

| | | |
|---|---|---|
| ಹೆಸರು ಶ್ರೀ/ಶ್ರೀ ಮತಿ. | - | ರಂಗಪ್ಪ |
| ತಂದೆ / ಗಂಡನ ಹೆಸರು | - | ಕಾಕಪ್ಪ |
| ವಯಸ್ಸು | - | 56 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಫಲವನಹಳ್ಳಿ |

<u>ಮುಖ್ಯ ವಿಚಾರಣೆ:-</u> ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಜಗಳ ಮಾಡಿದ ವಿಚಾರವಾಗಿ ದಿ.28-01-2016 ರಂದು ಪೊಲೀಸರು ನನ್ನನ್ನು ಕರೆಸಿ, ಈ ಸಹಿ ಮಾಡಲು ಕೋರಿದ್ದು, ನಾನು ನಿಪಿ.2 ಮಹಜರ್ಗೆ ಸಹಿ ಮಾಡಿರುತ್ತೇನೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ದೋ.ಸಾ.2 ಸ್ಥಳದಲ್ಲಿದ್ದರು. ಪೊಲೀಸರು ಜಗಳ ಮಾಡಿದ ಸ್ಥಳವನ್ನು ತೋರಿಸಿರುತ್ತಾರೆ. ಪೊಲೀಸರ ಜೊತೆ ಗೋವಿಂದರಾಜು ರವರು ಸ್ಥಳದಲ್ಲಿದ್ದರು. ನಾನು ಅನಿರೀಕ್ಷಿತವಾಗಿ ಹೋಗಿದ್ದು, ಅಗ ಸುಮಾರು 6-00, 7-00 ಗಂಟೆಯಾಗಿರಬಹುದು. ಪೊಲೀಸರು ಫೋಟೋ ತೆಗೆಸಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ಸಾಕ್ಷಿಗೆ ಮು.ಮಾ.1 ಮತ್ತು 2 ನ್ನು ತೋರಿಸಿ ,ಸಾಕ್ಷಿ ನೋಡಿ ನನ್ನ ಸಮಕ್ಷಮ ವಶಪಡಿಸಿಕೊಂಡಿರುವುದಿಲ್ಲ ಎಂದರು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀಸವಾಲು:-</u> ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನನ್ನ ಸಮಕ್ಷಮ ಪೊಲೀಸರು ಮು.ಮಾ.1 , 2 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

<u>ಪಾಟೀಸವಾಲು:-</u> ಆರೋಪಿ ಪರ ವಕೀಲರಿಂದ.

ನಿಪಿ.2 ರ ಪಂಚನಾಮೆಯಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ .

ಪೊಲೀಸರು ಸಹಿ ಮಾಡಲು ಕೋರಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ .

ಮರು ವಿಚಾರಣೆ : - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.

<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ , ಹೊನ್ನಾಳಿ.</u>

CC. No.467/2016

ದೋ.ಸಾ. 02

ಅ.ಸಾ. 02

ಪ್ರ.ವ.ಬೊ. ದಿನಾಂಕ. 09-03-2022

| | | |
|---|---|---|
| ಹೆಸರು ಶ್ರೀ/ಶ್ರೀ ಮತಿ. | - | ಸತ್ಯನಾರಾಯಣ |
| ತಂದೆ / ಗಂಡನ ಹೆಸರು | - | ಕರಿಯಪ್ಪ |
| ವಯಸ್ಸು | - | 62 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಫಲವನಹಳ್ಳಿ |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಜಗಳ ಮಾಡಿದ ವಿಚಾರವಾಗಿ ದಿ.28-01-2016 ರಂದು ಪೊಲೀಸರು ನನ್ನನ್ನು ಕರೆಸಿ, ಈ ಸಹಿ ಪಡೆದಿರುತ್ತಾರೆ. ಸಾಕ್ಷಿ ಈಗ ಒಂದು ಮಹಜರ್ ನೋಡಿ ಗುರುತಿಸಿದ್ದು, ಅದನ್ನುನಿಪಿ.2 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ದೋ.ಸಾ.3 ನನ್ನ ಜೊತೆ ಹಾಜರಿದ್ದರು. ದೋ.ಸಾ.6 ಗೋವಿಂದರಾಜರವರು ಸ್ಥಳವನ್ನು ಪೊಲೀಸರಿಗೆ ತೋರಿಸಿರುತ್ತಾರೆ. ಸಂಜೆ 4-00 ರಿಂದ 5-00 ರ ವರೆಗೆ ನಿಪಿ.2 ಮಹಜರ್ ಕ್ರಮ ಜರುಗಿಸಲಾಯಿತು. ಪೊಲೀಸರು ಸ್ಥಳದಲ್ಲಿ ಫೋಟೋ ತೆಗೆಸಿರುತ್ತಾರೆ. ಎರಡು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.3, 4 ಎಂದು ಗುರುತಿಸಲಾಯಿತು. ಪೊಲೀಸರು ಗುನ್ಹಾ ಸ್ಥಳದಿಂದ ಒಂದು ಕುಡುಗೋಲು ಮತ್ತು ಒಂದು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತು 2 ನ್ನು ನೋಡಿ ಸದರಿ ವಸ್ತುಗಳನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡ ಮು.ಮಾಲುಗಳು ಹೌದೋ ಅಲ್ಲವೋ ಎಂದು ನನಗೆ ನೆನಪಿರುವುದಿಲ್ಲ. ಆ ರೀತಿ ಇರುವ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ ಎನ್ನುತ್ತಾರೆ.

<u>ಪಾಟೀಸವಾಲುಃ-</u> ಆರೋಪಿ ಪರ ವಕೀಲರಿಂದ.

ಫಿರ್ಯಾದಿಗೆ ನಾನು ಚಿಕ್ಕಪ್ಪನಾಗಬೇಕು ಎಂದರೆ ಸರಿ. ದಿ.28-01-2016 ರಂದು ಪೊಲೀಸರು ಗುನ್ಹಾ ಸ್ಥಳಕ್ಕೆ ಬಂದಿರುತ್ತಾರೆ. ನಿಪಿ.2 ರ ಮಹಜರ್ ನಲ್ಲಿ ಏನು ಬರೆದಿದ್ದಾರೆ ಎಂದು

ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಜಗಳ ಮಾಡಿರುತ್ತಾರೆ ಎಂದು ಹೇಳಿ ಬರೆದಿರುತ್ತಾರೆ. ಮಹಜರ್ ನಲ್ಲಿ ನಿಖರವಾಗಿ ಏನು ಬರೆದಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ . ಪೊಲೀಸರು ಸಹಿ ಮಾಡಲು ಕೋರಿದ ಕಾರಣ ಸಹಿ ಮಾಡಿದ್ದೇನೆ ಎಂದರೆ ಸರಿ. ಠಾಣೆಗೆ ಹೋದಾಗಲೂ ಸಹ ಸಹಿ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ - ನಾನು ಠಾಣೆಗೆ ಹೋಗಿದ್ದೇನೋ ಇಲ್ಲವೋ ಎಂದು ಈಗ ನೆನಪಿಲ್ಲ ಎನ್ನತ್ತಾರು. ಮಹಜರ್ ಕಾಲಕ್ಕೆ- ನಾನು, ರಂಗಪ್ಪ , ಗೋವಿಂದ ರಾಜು ಹಾಜರಿದ್ದೇವು. ಮಹಜರ್ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ಪೊಲೀಸ್ ಠಾಣೆಗೆ ಹೋದಾಗ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಗುನ್ನಾ ಸ್ಥಳಕ್ಕೆ ಬಂದು ನಿಪಿ.2 ಮಹಜರ್ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ನನ್ನ ಸಂಬಂಧಿಕನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ಕ್ಕು ಹಾಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

<u>ಮರು ವಿಚಾರಣೆ</u>.: - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.